# ಪ್ರಾರ್ಥನೆ

ಸ್ವಾಮಿ ವಿವೇಕಾನಂದರಿಂದ ರಚಿತವಾದ ಶ್ರೀರಾಮಕೃಷ್ಣಸ್ತೋತ್ರ

ಆಚಂಡಾಲಾಪ್ರತಿಹತರಯೋ
ಯಸ್ಯ ಪ್ರೇಮಪ್ರವಾಹಃ
ಲೋಕಾತೀತೋಽಪ್ಯಹಹ ನ ಜಹೌ
ಲೋಕಕಲ್ಯಾಣಮಾರ್ಗಮ್ ।
ತ್ರೈಲೋಕ್ಯೇಽಪ್ಯಪ್ರತಿಮಮಹಿಮಾ
ಜಾನಕೀಪ್ರಾಣಬಂಧಃ
ಭಕ್ತ್ಯಾ ಜ್ಞಾನಂ ವೃತವರವಪುಃ
ಸೀತಯಾ ಯೋ ಹಿ ರಾಮಃ ॥

ಯಾರ ಪ್ರೇಮಪ್ರವಾಹವು ಚಂಡಾಲನವರೆಗೂ ತಡೆಯಿಲ್ಲದೆ ಹರಿಯುತ್ತಿತ್ತೋ, ಯಾರು ಲೋಕವನ್ನು ಮೀರಿದವನಾಗಿದ್ದರೂ ಲೋಕಕಲ್ಯಾಣಕ್ಕಾಗಿ ಶ್ರಮಿಸಿದನೋ, ಯಾರ ಮಹಿಮೆಗೆ ಮೂರು ಲೋಕಗಳಲ್ಲಿಯೂ ಸಾಟಿಯಿಲ್ಲವೋ, ಯಾರು ಜಾನಕಿಯ ಪ್ರಾಣಾಧಾರನೋ, ಯಾರ ಜ್ಞಾನರೂಪ ಶರೀರವು ಭಕ್ತಿರೂಪಳಾದ ಸೀತೆಯಿಂದ ಆವೃತವಾಗಿತ್ತೋ ಅಂತಹ ಶ್ರೀರಾಮನು—

ಸ್ತಬ್ಧೀಕೃತ್ಯ ಪ್ರಲಯಕಲಿತಂ
ವಾಹವೋತ್ಥಂ ಮಹಾಂತಂ
ಹಿತ್ವಾ ರಾತ್ರಿಂ ಪ್ರಕೃತಿಸಹಜಾ-
ಮಂಧತಾಮಿಸ್ರಮಿಶ್ರಾಮ್ ।
ಗೀತಂ ಶಾಂತಂ ಮಧುರಮಪಿ ಯಃ
ಸಿಂಹನಾದಂ ಜಗರ್ಜ
ಸೋಽಯಂ ಜಾತಃ ಪ್ರಥಿತಪುರುಷೋ
ರಾಮಕೃಷ್ಣಸ್ತ್ವಿದಾನೀಮ್ ॥

ಯಾರು ಪ್ರಲಯಕಾಲದ ಶಬ್ದದಂತಿದ್ದ ಕುರುಕ್ಷೇತ್ರ ಯುದ್ಧದ ಮಹಾ ಶಬ್ದವನ್ನು ಅಡಗಿಸಿಬಿಟ್ಟನೊ, (ಅರ್ಜುನನ) ಪ್ರಕೃತಿ ಸಹಜವಾದ ಅಜ್ಞಾನಾಂಧಕಾರ ರೂಪದ ರಾತ್ರಿಯನ್ನು ಹೋಗಲಾಡಿಸಿದನೋ, ಶಾಂತವೂ ಮಧುರವೂ ಆಗಿದ್ದರೂ ಸಿಂಹನಾದದಂತೆ ಇದ್ದ ಭಗವದ್ಗೀತೆಯನ್ನು ಬೋಧಿಸಿದನೋ, ಅಂತಹ ಪ್ರಸಿದ್ಧಪುರುಷನಾದ ಶ್ರೀಕೃಷ್ಣನು ಈಗ ಶ್ರೀರಾಮಕೃಷ್ಣರಾಗಿ ಅವತರಿಸಿದ್ದಾರೆ.

# ಸೂಕ್ತಿಪ್ರಭ

ಮೊದಲು ನಿನ್ನನ್ನು ನೀನು ತಿಳಿ. ಅನಂತರ ದೇವರನ್ನು ತಿಳಿಯುವೆ.

ಮನಸ್ಸೇ ಎಲ್ಲಕ್ಕೂ ಮೂಲ ಎಂಬುದನ್ನು ತಿಳಿದು ಕೊಳ್ಳಿ. ಅದು ಒಬ್ಬನನ್ನು ಬುದ್ಧಿವಂತನನ್ನಾಗಿ ಅಥವಾ ದಡ್ಡನನ್ನಾಗಿ ಮಾಡುವುದು.

ನೀವು ಹುಡುಕುವುದು ನಿಮಗೆ ದೊರಕುತ್ತದೆ. ಯಾರು ದೇವರನ್ನು ಹುಡುಕುತ್ತಾರೆಯೋ ಅವರಿಗೆ ದೇವರು ದೊರಕುತ್ತಾನೆ. ಯಾರು ಧನ ಅಥವಾ ಕೀರ್ತಿಯನ್ನು ಹುಡುಕುತ್ತಾರೆಯೋ ಅವರು ಅದನ್ನು ಪಡೆಯುತ್ತಾರೆ.

ಎಣ್ಣೆ ತಗಲಿದ ಕಾಗದದ ಮೇಲೆ ಬರೆಯಲಾಗುವುದಿಲ್ಲ. ಇದರಂತೆಯೆ ಇಂದ್ರಿಯ ಭೋಗಾಭಿಲಾಷೆಗಳಿಂದ ಕೆಟ್ಟುಹೋದ ಮನಸ್ಸು ಭಗವಂತನ ಧ್ಯಾನಕ್ಕೆ ಯೋಗ್ಯವಲ್ಲ.

ನಿಮ್ಮ ಮಾತು ಮತ್ತು ಆಲೋಚನೆ ಒಂದೇ ಆಗಿರಲಿ. ಅದೇ ನಿಜವಾದ ಸಾಧನೆ. ಅದಲ್ಲದೆ 'ಪ್ರಪಂಚವೇ ನನ್ನ ಸರ್ವಸ್ವ' ಎಂಬ ನಂಬಿಕೆ ಮನಸ್ಸಿನಲ್ಲಿ ಬೇರೂರಿರುವಾಗ 'ಹೇ ದೇವರೆ, ನೀನೇ ನನ್ನ ಸರ್ವಸ್ವ' ಎಂದು ಹೇಳಿದರೆ ನಿಮ್ಮ ಸಾಧನೆ ನಿಷ್ಫಲವಾಗುವುದರಲ್ಲಿ ಸಂದೇಹವಿಲ್ಲ.

ಒರೆಗಲ್ಲಿನಿಂದ ಹಿತ್ತಾಳೆಗೂ ಚಿನ್ನಕ್ಕೂ ಇರುವ ವ್ಯತ್ಯಾಸ ತಿಳಿಯುವಂತೆ ದೇವರು ಒಬ್ಬನ ಸ್ವಭಾವ, ಕಪಟವೆ ಅಥವಾ ಸತ್ಯವೆ ಎಂಬುದನ್ನು ಪರೀಕ್ಷಿಸುವನು.

ಯಾರು ತಮ್ಮ ಮನಸ್ಸನ್ನು ತಾವೇ ವಂಚಿಸದೆ ಇರುವರೋ ಅವರಿಗೇ ಮುಕ್ತಿ. ನಿಷ್ಕಾಪಟ್ಯ ಮತ್ತು ಶ್ರದ್ಧೆ, ಇವೇ ಮುಕ್ತಿಗೆ ಮಾರ್ಗ.

—ಶ್ರೀರಾಮಕೃಷ್ಣ